ಉತ್ತರ ಕನ್ನಡ ಜಿಲ್ಲೆಯ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಿರುವ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶ ದೊರಕಿಸಿಕೊಟ್ಟಿರುವ ಬಗ್ಗೆ

563. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಉದ್ಯೋಗಾವಕಾಶಗಳ ಸಲುವಾಗಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೋಂದಣಿ ಮಾಡಿಸಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ವಿವರವನ್ನು ನೀಡುವುದು).

ಆ) ಇವರ ಪೈಕಿ ಜನವರಿಯಿಂದ ಇಲ್ಲಿಯವರೆಗೆ ಎಷ್ಟು ಜನ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶದ ಸಲುವಾಗಿ ಯಾವ ಯಾವ ಸಂಸ್ಥೆಗಳಿಗೆ (ಸರ್ಕಾರಿ ಮತ್ತು ಖಾಸಗಿ) ಸಂದರ್ಶನಗಳನ್ನು ಕಳುಹಿಸಲಾಗಿದೆ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ಸಚಿವರು):–

ಅ) 40,948 (ದಿನಾಂಕ 30–9–90ಕ್ಕೆ)

(ದೂರವಾಣಿಯ ಅಡಚಣೆಯಿಂದಾಗಿ ತಾಲ್ಲೂಕುವಾರು ಮಾಹಿತಿ ನೀಡಲು ಸಾಧ್ಯವಾಗಿಲ್ಲ)

ಆ) 2,850 (ದಿನಾಂಕ 30–9–90ಕ್ಕೆ)

(ದೂರವಾಣಿಯ ಅಡಚಣೆಯಿಂದಾಗಿ ಸರ್ಕಾರಿ ಮತ್ತು ಖಾಸಗಿ ಮಾಹಿತಿಯನ್ನು ನೀಡಲು ಸಾಧ್ಯವಾಗಿಲ್ಲ)

ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಮುಚ್ಚಿರುವ ಮಿಶಾಳ ಪೇಪರ್ ಮಿಲ್ಲನ್ನು ಪುನರಾರಂಭಿಸಲು ಕ್ರಮ ಕೈಗೊಳ್ಳುವ ಬಗ್ಗೆ

607. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿರುವ ಮಿಶಾಳ ಪೇಪರ್ ಮಿಲ್ ಮುಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಈ ಮಿಲ್ ಮುಚ್ಚಲು ಕಾರಣಗಳೇನು?

ಇ) ಸದರಿ ಮಿಲ್ಲು ಮುಚ್ಚಿರುವುದರಿಂದ ನೂರಾರು ಜನ ಕಾರ್ಮಿಕರು ಕೆಲಸ ಕಳೆದುಕೊಂಡು ಬೀದಿ ಪಾಲಾಗಿರುವುದರಿಂದ ಸರ್ಕಾರದವರು ಕೂಡಲೇ ಮಧ್ಯಪ್ರವೇಶ ಮಾಡಿ ಈ ಮಿಲ್ಲನ್ನು ಪುನರಾರಂಭಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಎ.ಎಸ್. ನಾಡಗೌಡ (ರಾಜ್ಯ ಕಾರ್ಮಿಕ ಸಚಿವರು) :–

ಅ) ಹೌದು.

ಆ) ಈ ಮಿಲ್ಲನ್ನು ಆಡಳಿತವರ್ಗದವರು ಮುಚ್ಚಲಿಲ್ಲ. ಆದರೆ ಆಡಳಿತವರ್ಗದವರು ರಾಜ್ಯದ ಹಣಕಾಸು ಸಂಸ್ಥೆಗಳಾದ ಕೆ.ಎಸ್.ಎಫ್.ಸಿ (ಕರ್ನಾಟಕ ರಾಜ್ಯ ಹಣಕಾಸು ನಿಗಮ) ಮತ್ತು ಕೆ.ಎಸ್.ಐ.ಡಿ.ಸಿ. (ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ) ಈ ಸಂಸ್ಥೆಗಳಿಂದ ಸಾಲದ ರೂಪದಲ್ಲಿ ಆರ್ಥಿಕ ಸಹಾಯ ಪಡೆದಿದ್ದು ಅವನ್ನು ಸೂಕ್ತ ಸಮಯದಲ್ಲಿ ಮರುಪಾವತಿ ಮಾಡದಿರುವುದರಿಂದ ಎರಡೂ ಸಂಸ್ಥೆಗಳೂ ಸೇರಿ ಈ ಕಾರ್ಖಾನೆಯನ್ನು ದಿನಾಂಕ 30–8–1990ರಂದು ಬೀಗಮುದ್ರೆ ಮಾಡಿರುತ್ತಾರೆ.

ಇ) ಸರ್ಕಾರವು ಕೈಗಾರಿಕಾ ಕಾಯ್ದೆಯನ್ವಯ ಕ್ರಮ ಕೈಗೊಳ್ಳಲು ಸಿದ್ಧವಿದೆ. ಹುಬ್ಬಳ್ಳಿಯ ಸಹಾಯಕ ಕಾರ್ಮಿಕ ಆಯುಕ್ತರು ಆಡಳಿತ ವರ್ಗ ಮತ್ತು ಕಾರ್ಮಿಕ ವರ್ಗದವರಿಗೆ ಒಂದು ಸೂಚನಾ ಪತ್ರ ಹೊರಡಿಸಿ, ಒಂದು ಜಂಟಿ ಸಭೆಯನ್ನು ನಡೆಸುವಂತೆ ಸೂಚಿಸಿರುವರು. ಆದರೆ ಉಭಯತ್ರರೂ ಈ ದಿಸೆಯಲ್ಲಿ ಜಂಟಿ ಸಭೆಯನ್ನು ನಡೆಸುವುದಕ್ಕಾಗಲೀ, ವಿವಾದವನ್ನು ಎತ್ತುವುದಕ್ಕಾಗಲೀ, ಹುಬ್ಬಳ್ಳಿಯ ಸಹಾಯಕ ಕಾರ್ಮಿಕ ಆಯುಕ್ತರು ಇದುವರೆಗೂ ಸಂಪರ್ಕಿಸಿರುವುದಿಲ್ಲ.

ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಮುಜರಾಯಿ ಇಲಾಖೆಯ ದೇವಸ್ಥಾನಗಳ ಸಂಖ್ಯೆ ಬಗ್ಗೆ

561. ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಬರುವ ದೇವಸ್ಥಾನಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ದೇವಸ್ಥಾನಗಳ ಹೆಸರು ಮತ್ತು ವಿಳಾಸವನ್ನು ನೀಡುವುದು.

ಇ) ಈ ದೇವಸ್ಥಾನಗಳಿಗೆ 1989–90 ಮತ್ತು 1990–91ನೇ ಸಾಲಿನಲ್ಲಿ ಜೀರ್ಣೋದ್ಧಾರ ಕಲ್ಯಾಣ ಮಂಟಪ ನಿರ್ಮಾಣ ಹಾಗೂ ಇತರೆ ನಿರ್ಮಾಣ ಕೆಲಸದ ಸಲುವಾಗಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ.

ಈ) ಪ್ರತಿಯೊಂದು ದೇವಸ್ಥಾನಗಳಿಗೆ ಯಾವ ಯಾವ ಕೆಲಸಗಳಿಗೆ ಹಣ ಬಿಡುಗಡೆ ಮಾಡಲಾಗಿದೆ (ಪ್ರತ್ಯೇಕ ವಿವರ ನೀಡುವುದು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):–

ಅ) 719 ದೇವಸ್ಥಾನಗಳು (ಪಟ್ಟಿ ಲಗತ್ತಿಸಿದೆ)

ಆ) ಪಟ್ಟಿ ಲಗತ್ತಿಸಿದೆ.

ಇ) 1989–90ರ ಸಾಲಿನಲ್ಲಿ ಹಣ ಬಿಡುಗಡೆ ಮಾಡಿದ ವಿವರಗಳು

ಕಾಮಗಾರಿ ಹೆಸರು	ಮಂಜೂರಾದ ಹಣ
ಜೀರ್ಣೋದ್ಧಾರ	1,99,000–00
ಕಲ್ಯಾಣ ಮಂಟಪ	6,00,000–00

1990–91ನೇ ಸಾಲಿನಲ್ಲಿ ಅನುದಾನ ಇನ್ನೂ ಬಿಡುಗಡೆ ಮಾಡಿರುವುದಿಲ್ಲ.

ಈ) ಪಟ್ಟಿ ಲಗತ್ತಿಸಿದೆ.

ಯಲ್ಲಾಪುರ

ಕ್ರ.ಸಂ.	ದೇವಸ್ಥಾನದ ಹೆಸರು ಮತ್ತು ಊರು
1)	ಶ್ರೀ ಗೋಪಾಲಕೃಷ್ಣ ದೇವ, ಅನಗೂಡ
2)	ಶ್ರೀ ಗೋಪಾಲಕೃಷ್ಣ ದೇವರ, ಕೂಡಸಳ್ಳಿ
3)	ಶ್ರೀ ಅರಬೈಲ ಹನುಮಂತ ದೇವ, ಅರಬೈಲ
4)	ಶ್ರೀ ಗ್ರಾಮ ದೇವತೆ, ಯಲ್ಲಾಪೂರ